

ಕಡೆಗೆ ಬರುತ್ತಿದ್ದುದನ್ನು ಕಂಡೆ. ಮನೆಯ ಒಳಗೆ ಬಾರದಂತೆ ಆಕೆಗೆ ಕಣ್ಸನ್ನೆಯಿಂದ ತಿಳಿಸಿ, ಬಾಗಿಲು ಮುಚ್ಚಿ ಬಂದು ಕುಳಿತೆ. ಬೆಳಕಿಗಿಂತ ಕತ್ತಲೆಯನ್ನೇ ಬಯಸುವಂತಿತ್ತು ಭೂದೇವಿಯ ಭಾವ. ಹೇಳುತ್ತಿದ್ದುದನ್ನು ಮುಂದುವರೆಸಿದಳು:

'ದತ್ತು ತೆಗೆದುಕೊಳ್ಳುವ ವಿಷಯದಲ್ಲಿ ನಾವು ಒಮ್ಮತಕ್ಕೆ ಬಂದಿದ್ದೇವೆ. ತಂದೆ, ತಾಯಿ ಯಾರೂ ಇಲ್ಲದ ತಬ್ಬಲಿಯಾದ ಅನಾಥ ಮಗುವನ್ನು ಸಾಕಿ ಬೆಳೆಸುವ ಆಸೆ ನಮ್ಮದು. ಇದಕ್ಕೆ ಅತ್ತೆಯವರೂ ಸಮ್ಮತಿಸಿದ್ದಾರೆ. ನಮಗೊಂದು ಪುಟ್ಟ ಮಗುವನ್ನು ನೀವೇ ಹುಡುಕಿ ಕೊಡಬೇಕು ಡಾಕ್ಟರ್...' ದೈನ್ಯತೆಯಿಂದ ಕೂಡಿದ ಬೇಡಿಕೆಯಾಗಿತ್ತು.

ನಾನೆಂದೂ ಈ ಹಿಂದೆ ಇಂಥ ಕೆಲಸ ಮಾಡಿರಲಿಲ್ಲ. ಆದಕಾರಣ ಏನೆಂದು ಉತ್ತರಿಸಬೇಕೆಂದು ತೋಚದೇ ಗಲಿಬಿಲಿಗೊಳಗಾದೆ. 'ಅನಾಥ ಮಗು' ಅಂದಾಕ್ಷಣ, ಉಚಿತ ಆರೋಗ್ಯ ತಪಾಸಣೆಗೆಂದು ನಾನು ಭೇಟಿ ನೀಡುತ್ತಿದ್ದ ಅನಾಥಾಶ್ರಮದ ನೆನಪಾಯಿತು. ಸರಿ, ಅದೇ ಆಶ್ರಮದಲ್ಲಿಯೇ ಯಾಕೆ ವಿಚಾರಿಸಬಾರದು? ಎಂಬ ಆಲೋಚನೆಯೂ ಬಂತು. ಈ ಆಲೋಚನೆಯನ್ನು ಆಕೆಗೆ ಹೇಳಿದೆ. ಕೇಳಿ ಆಕೆಯ ಮುಖ ಅರಳಿತು.

ಮುಂದೆರಡು ಮೂರು ದಿನಗಳಲ್ಲಿ ನಾನಿಲ್ಲದಾಗ ಆಕೆಯ ಫೋನ್ ಬಂದಿತ್ತು. ಅನಾಥಾಲಯದ ನಿರ್ದೇಶಕರಿಗೆ ದೂರವಾಣಿ ಮೂಲಕ ವಿಷಯ ತಿಳಿಸಿದೆ. ನನಗೆ ತುಂಬಾ ಪರಿಚಯದವರಾದ ಅವರು, ತಮ್ಮ ಕೈಲಾದ ಸಹಾಯ ಮಾಡುವ ಭರವಸೆ ಇತ್ತರು. ಮರುದಿನವೇ ಒಂದು ಪರಿಚಯ ಪತ್ರ ಕೊಟ್ಟು ಭೂದೇವಿಯನ್ನು ಆಶ್ರಮಕ್ಕೆ ಕಳಿಸಿದೆ.

ಇದಾದ ಎರಡು ಮೂರು ದಿನಗಳ ತರುವಾಯ ಮಕ್ಕಳ ತಪಾಸಣೆಗೆಂದು ಆಶ್ರಮಕ್ಕೆ ಹೋದೆ.

ಕಳೆದ ಮೂರು ವರುಷಗಳಿಂದ ವರ್ಷಕ್ಕೆರಡು ಸಾರಿ ಆ ಆಶ್ರಮಕ್ಕೆ ಭೇಟಿ ನೀಡುತ್ತಿದ್ದೆ. ಆಶ್ರಮದಲ್ಲಿ ಹನ್ನೆರಡು ವರ್ಷದವರೆಗಿನ ಮಕ್ಕಳನ್ನು ಇಟ್ಟುಕೊಳ್ಳುತ್ತಿದ್ದರು. ಹೆಣ್ಣು ಗಂಡು ಸೇರಿ ಸುಮಾರು ಐವತ್ತು ಮಕ್ಕಳಿರಬಹುದು. ಇದೇ ಸಂಸ್ಥೆಯವರು ನಡೆಸುವ ಶಾಲೆಯಲ್ಲಿ ಮಕ್ಕಳಿಗೆ ಉಚಿತ ಶಿಕ್ಷಣ ದೊರೆಯುತ್ತಿತ್ತು. ಪ್ರಥಮ ಬಾರಿಗೆ ಈ ಆಶ್ರಮಕ್ಕೆ ಭೇಟಿ ಕೊಟ್ಟಾಗ ಮೆಚ್ಚುಗೆ ವ್ಯಕ್ತಪಡಿಸಿ, ನನ್ನ ಸೇವೆಯ ಅಗತ್ಯ ತಮಗಿದ್ದರೆ ಯಾವ ಸಂಕೋಚವಿಲ್ಲದೆ ತಿಳಿಸಬೇಕೆಂದು ಹೇಳಿದ್ದೆ. ಮುಂದೆ ಕೆಲವು ದಿನಗಳ ನಂತರ ಆಶ್ರಮದ ನಿರ್ದೇಶಕರಿಂದ ಬಂದ ಪತ್ರದಲ್ಲಿ, ವರ್ಷಕ್ಕೆರಡಾವರ್ತಿ ಎಲ್ಲ ಮಕ್ಕಳ ಉಚಿತ ಆರೋಗ್ಯ ತಪಾಸಣೆಗೆ ನನ್ನನ್ನು ನೇಮಿಸಿರುವುದಾಗಿ ತಿಳಿದಾಗ ಸ್ವಸಂತೋಷದಿಂದ ಸಮ್ಮತಿಸಿದ್ದೆ. ಅಲ್ಲಿಯ ಪ್ರತಿ ಭೇಟಿಯ ಅನುಭವವು ಮೌಲ್ಯಗಳ ಅಧ್ಯಯನ ನಡೆಸಿದಂತಿತ್ತು. ಪಾಲಕ ಪೋಷಕರನ್ನು ಪಡೆದ ಮಕ್ಕಳು ಮತ್ತು ಆಶ್ರಮದ ಮಕ್ಕಳ ಮಧ್ಯ ಇರುವ ವ್ಯತ್ಯಾಸ ಕಂಡು ಮರುಗಿದ್ದೆ. ಶಾರೀರಿಕವಾಗಿ ಎಷ್ಟೇ ಸದೃಢ ಮತ್ತು ಆರೋಗ್ಯವಂತರಾಗಿದ್ದರೂ, ಈ ಮಕ್ಕಳು ಮಾನಸಿಕವಾಗಿ ತೀರ ಭಿನ್ನವಾಗಿದ್ದವು. ತಾಯಿಯ ಲಾಲನೆ ಪಾಲನೆಯ, ವಾತ್ಸಲ್ಯದ, ಮಮತೆಯ ಕೊರತೆ ಎದ್ದು ಕಾಣುತ್ತಿತ್ತು. ಆ ಕಕ್ಕುಲಾತಿಯನ್ನು ಮತ್ತಾರೂ ತುಂಬಲಸಾಧ್ಯವೆಂಬ ಸತ್ಯವನ್ನು ನಾನು ಮನಗಂಡದ್ದು ಇಲ್ಲಿಯೇ.

ನಿತ್ಯದಂತೆ ನಾನು ಆರೋಗ್ಯ ತಪಾಸಣೆ ಪ್ರಾರಂಭಿಸಿದೆ. ಸುಂದರ, ಸರಿತಾ, ಸುಪ್ರಿಯ ಒಬ್ಬೊಬ್ಬರಾಗಿ ಬಂದು ತಪಾಸಣೆ ಮಾಡಿಸಿಕೊಂಡಾದ ಮೇಲೆ ತಿರುಗಿ ಹೋಗುತ್ತಿದ್ದರು.

'ನಮಸ್ಕಾರ ಡಾಕ್ಟರೆ' ಎನ್ನುತ್ತ ಆಶ್ರಮದ ನಿರ್ದೇಶಕರು ಆಗಮಿಸಿದಾಗ ಅರ್ಧದಷ್ಟು ಮಕ್ಕಳನ್ನು ನೋಡಿಯಾಗಿತ್ತು. ಸುಮಾರು ಮಕ್ಕಳೆಲ್ಲರ ಶಾರೀರಿಕ ಆರೋಗ್ಯ ಚೆನ್ನಾಗಿ ಇದ್ದದ್ದನ್ನು ಕಂಡು ನಿರ್ದೇಶಕರನ್ನು ಅಭಿನಂದಿಸಿದೆ. ಅದೇ ವೇಳೆಗೆ ಜವಾನ ತಂದಿಟ್ಟ ಚಹಾ ಸೇವಿಸುತ್ತ ನಿರ್ದೇಶಕರು ಮಾತಿಗಾರಂಭಿಸಿದರು.

'ಡಾಕ್ಟರ್, ನೀವು ಕಳಿಸಿದ ಭೂದೇವಿ ಬಂದಿದ್ದರು' ಎಂದಾಗ, ಈ ಬಗ್ಗೆ ನಾನೇ ಕೇಳಬೇಕಿತ್ತು ಅಂದುಕೊಂಡು ನನ್ನನ್ನು ನಾನೇ ಶಪಿಸಿಕೊಂಡೆ. ಮುಂದೇನಾಯಿತು ಎಂಬ ಕುತೂಹಲದಿಂದ ಚಹಾ ಕುಡಿಯುವುದನ್ನೇ ಮರೆತು ಅವರ ಮಾತುಗಳನ್ನಾಲಿಸುತ್ತ ಕುಳಿತು ಬಿಟ್ಟೆ.

ಆಕೆ ಎರಡು ದಿನಗಳ ಹಿಂದೆ ಗಂಡನ ಜೊತೆಗೆ ಬಂದಿದ್ದಳು. ಸಾಕಷ್ಟು ಸಮಯದವರೆಗೆ ಆಶ್ರಮದ ಪುಟ್ಟ ಮಕ್ಕಳೊಂದಿಗಿರಲು ಅವಕಾಶ ಮಾಡಿಕೊಟ್ಟಿದ್ದರೂ ಕೊನೆಗೆ ಯಾವುದೇ ನಿರ್ಣಯಕ್ಕೆ ಬಾರದೆ ತಿರುಗಿ ಹೋಗಿದ್ದರು. ಎರಡು ದಿನಗಳ ನಂತರ, ಅಂದರೆ ನಾನು ಮಕ್ಕಳ ತಪಾಸಣೆ ಮಾಡುತ್ತಿರುವ ದಿನವೇ ಬೆಳಿಗ್ಗೆ ಭೂದೇವಿ ಒಬ್ಬಳೇ ಬಂದು ಮತ್ತೊಮ್ಮೆ ಪುಟ್ಟ ಪುಟ್ಟ ಮಕ್ಕಳನ್ನು ಬಹಳ ಹತ್ತಿರದಿಂದ ನೋಡಿ ನಿರ್ಧರಿಸಲಾರದೆ ತಿರುಗಿ ಹೋಗಿದ್ದಳು.

ಇಷ್ಟು ವಿವರ ನೀಡಿದ ನಿರ್ದೇಶಕರು ಹೋದ ಮೇಲೆ ನಾನು ಇನ್ನುಳಿದ ಮಕ್ಕಳ ತಪಾಸಣೆ ಮುಂದುವರೆಸಿದೆ. ರೂಪಾ, ರೇಖಾ, ರಮೇಶ, ಸರಸ್ವತಿ, ರಾಕೇಶ, ಸುನೀಲ...

ಸುನೀಲ ಉಳಿದೆಲ್ಲ ಮಕ್ಕಳಿಗಿಂತ ಚುರುಕಾಗಿದ್ದ. ನನಗೆ ಸುನೀಲನೆಂದರೆ ವಿಶೇಷ ಆಸಕ್ತಿ. ಮಕ್ಕಳು ಕೂಡ ಇದನ್ನು ಎಷ್ಟು ಬೇಗ ಅರಿತುಕೊಳ್ಳುತ್ತವೆ ಎಂದು ಆಶ್ಚರ್ಯವಾಗುವಷ್ಟು ಸುನೀಲ ನನ್ನನ್ನು ಹಚ್ಚಿಕೊಂಡಿದ್ದ. ನನಗೆ ಅರಿವಿಲ್ಲದೆಯೇ ಉಳಿದೆಲ್ಲ ಮಕ್ಕಳಿಗಿಂತ ಆತನ ಕುರಿತು ಹೆಚ್ಚಿನ ಕಾಳಜಿ ವಹಿಸಿದ್ದೇನೆಯೇ ಎಂದು ನನಗೇ ಸಂದೇಹ ಬರುವಷ್ಟು ಆರೋಗ್ಯವಂತನಾಗಿದ್ದ. ಮೂರು ವರುಷಗಳ ಹಿಂದಿನ ಘಟನೆಯಾದರೂ ನನಗೆ ಸರಿಯಾಗಿ ನೆನಪಿದೆ. ಏಕೆಂದರೆ ಈ ಅನಾಥಾಶ್ರಮಕ್ಕೆ ಪ್ರಥಮ ಸಾರಿ ಬಂದದ್ದು ಈ ಸುನೀಲನೊಂದಿಗೆ. ಸುನೀಲ ಆಗ ಏಳೆಂಟು ದಿನಗಳ ಹೆಸರಿಡದ ಹಸುಗೂಸು.

ನಾನು ಆಗ ಇಲ್ಲಿಂದ ಸುಮಾರು ಐವತ್ತು ಮೈಲು ದೂರದ ಆಸ್ಪತ್ರೆಯಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದೆ. ಊರ ಹೊರಗೆ ನಿರ್ಜನ ಪ್ರದೇಶದಲ್ಲಿದ್ದ ಆಸ್ಪತ್ರೆ ಅದು. ಹತ್ತಿರದ ಏಳೆಂಟು ಹಳ್ಳಿಗಳಿಂದ ಜನರು ಚಿಕಿತ್ಸೆಗಾಗಿ ಈ ಆಸ್ಪತ್ರೆಗೆ ಬರುತ್ತಿದ್ದರು. ಅಲ್ಲೇ ಒಂದು ಶಾಲೆಯನ್ನು ನಡೆಸುತ್ತಿದ್ದ ಧರ್ಮಗುರುಗಳ ಮೇಲ್ವಿಚಾರಣೆಯಲ್ಲಿ ದಾಯಿಗಳೇ ತುಂಬ ಸೇವಾ ಮನೋಭಾವದಿಂದ ಈ ಆಸ್ಪತ್ರೆಯನ್ನು ನೋಡಿಕೊಳ್ಳುತ್ತಿದ್ದುದು ವಿಶೇಷ.

ನಾನು ಅಲ್ಲಿ ಕೆಲಸಕ್ಕೆ ಸೇರಿ ಐದಾರು ತಿಂಗಳು ಕಳೆದಿರಬಹುದು. ಒಂದು ದಿನ ಎಲ್ಲ ಕೆಲಸ ಮುಗಿಸಿ ಕುಳಿತಿದ್ದೆ. ಧರ್ಮಗುರುಗಳು ಒಬ್ಬ ಹೆಣ್ಣುಮಗಳೊಂದಿಗೆ ಆಸ್ಪತ್ರೆಗೆ ಬಂದು ಆಕೆಯನ್ನು ತಪಾಸಣೆ ನಡೆಸುವಂತೆ ಹೇಳಿದರು. ಆಕೆ ಐದು ತಿಂಗಳ ಗರ್ಭಿಣಿ ಎಂಬುದನ್ನು ಗುರುತಿಸಲು ನನಗೆ ಹೆಚ್ಚು ಸಮಯ ಹಿಡಿಯಲಿಲ್ಲ. ಆಕೆಯನ್ನು ಒಳರೋಗಿಯಾಗಿ ಆಸ್ಪತ್ರೆಗೆ ಸೇರಿಸಲು ಹೇಳಿ ಕಳಿಸಿದೆ. ನಂತರ ಗುರುಗಳು ಆಕೆಯ ವೃತ್ತಾಂತವನ್ನು ವಿವರಿಸಿದರು.

ಹತ್ತಿರದ ಹಳ್ಳಿಯೊಂದರ ಮಧ್ಯಮ ವರ್ಗದ ಕುಟುಂಬದಲ್ಲಿ ಹುಟ್ಟಿ ಬೆಳೆದ ಆಕೆ ಗುರುಗಳೇ ನಡೆಸುತ್ತಿದ್ದ ಶಾಲೆಯಲ್ಲಿ ಎಸ್ಸೆಸ್ಸೆಲ್ಸಿವರೆಗೆ ಓದಿದ್ದಳು. ದೂರದ ಪಟ್ಟಣದಿಂದ ಯಾರದೋ ಮನೆಗೆ ಬಂದಿದ್ದ ಯುವಕನೊಬ್ಬ ಅವಳ ಮುಗ್ಧತೆಯನ್ನು ದುರುಪಯೋಗಪಡಿಸಿಕೊಂಡಿದ್ದ. ಆತ ಮಾಡಿದ ಮೋಸಕ್ಕೆ ಬಲಿಯಾದ ಅವಳ ಪರಿಸ್ಥಿತಿಯ ಗಂಭೀರತೆಯ ಅರಿವು ಆಗುತ್ತಿದ್ದಂತೆಯೆ ಅವನು ಅಲ್ಲಿಂದ ಕಂಬಿ ಕಿತ್ತಿದ್ದ. ಆಗ ತಾನೇ ಅರಳಿದ ಕುಸುಮದಂತಿದ್ದ ಆಕೆ ಭಯದಿಂದ ಯಾರೆದುರೂ ತುಟಿ ಬಿಚ್ಚಿರಲಿಲ್ಲ. ಇವಳಲ್ಲಾದ ದೈಹಿಕ ಬದಲಾವಣೆಯನ್ನು ಕಂಡು ಸಂದೇಹಗೊಂಡ ತಾಯಿ ಅವಳಿಂದ ಎಲ್ಲ ವಿಷಯ ತಿಳಿದುಕೊಂಡು, ಹೇಗಾದರೂ ಮಾಡಿ ತಮ್ಮ ಮಾನ ಮರ್ಯಾದೆಯನ್ನು ಕಾಪಾಡಬೇಕೆಂದು ಗುರುಗಳಲ್ಲಿ ವಿನಂತಿಸಿಕೊಂಡಿದ್ದಳು. ಎಲ್ಲ ತಿಳಿಸಿಯಾದ ಮೇಲೆ ಗುರುಗಳು ಭ್ರೂಣ ಹತ್ಯೆ ಮಾಡಕೂಡದೆಂದು ನಿಷ್ಠುರವಾಗಿ ಹೇಳಿ, ಹೆರಿಗೆ ಆಗುವವರೆಗೆ ಆಕೆ ಇಲ್ಲೇ ಇರಲೆಂದು ಹೇಳಿ ಹೋದರು.

ಆ ಬಳಿಕ ನಾಲ್ಕು ತಿಂಗಳುಗಳ ಕಾಲ ಆಕೆ ಆಸ್ಪತ್ರೆಯಲ್ಲಿಯೇ ಉಳಿದಳು. ಅವಳಿದ್ದ ಕೋಣೆಯಲ್ಲಿ ಯಾವಾಗಲೂ ಕತ್ತಲಾವರಿಸಿರುತ್ತಿತ್ತು. ಅವಳನ್ನು ನೋಡಲು ಯಾರೂ ಬರುತ್ತಿರಲಿಲ್ಲ. ಅವಳ ಎಲ್ಲ ಅವಶ್ಯಕತೆಗಳನ್ನು ದಾಯಿಗಳೇ ಪೂರೈಸುತ್ತಿದ್ದರು. ತನ್ನ ಕೋಣೆಯಿಂದ ಆಕೆ ಎಂದೂ ಹೊರಗೆ ಬರುತ್ತಿರಲಿಲ್ಲ. ಗುರುಗಳೇ ಎಲ್ಲ ಹೇಳಿದ್ದರಿಂದ ನಾವೂ ಕೂಡ ಆಕೆಗೆ ಹೆಚ್ಚಿನ ಪ್ರಶ್ನೆ ಕೇಳುತ್ತಿರಲಿಲ್ಲ.

ಆರೋಗ್ಯವಂತಳಾಗಿದ್ದ ಆಕೆ ದಿನ ತುಂಬಿ ಗಂಡು ಕೂಸಿಗೆ ಜನ್ಮವಿತ್ತಳು. ಒಂದು ವಾರ ಕಳೆದ ಮೇಲೆ ಗುರುಗಳೇ ಬಂದು ಮಗುವಿನ ಜೋಪಾನ ಮಾಡುವ ವ್ಯವಸ್ಥೆ ಮಾಡಿರುವುದಾಗಿ, ಎಲ್ಲ ವಿವರಗಳನ್ನು ತಿಳಿಸಿ, ಅಂದೇ ತಮ್ಮ ಕಾರನ್ನು ಕಳಿಸುವುದಾಗಿ ಹೇಳಿ, ನಾನೂ ಅದರಲ್ಲಿ ಹೋಗಬೇಕೆಂದು ಹೇಳಿದರು.

ಆವತ್ತಿನ ಪ್ರಸಂಗ ಇನ್ನೂ ನನ್ನ ಕಣ್ಣ ಮುಂದೆ ಕಟ್ಟಿದಂತಿದೆ. ಹಸುಗೂಸು, ಕೂಸಿನ ತಾಯಿ, ಒಬ್ಬ ದಾಯಿ, ಮತ್ತು ನಾನು ಕಾರಿನಲ್ಲಿ ಅನಾಥಾಶ್ರಮ ಮುಟ್ಟಿದಾಗ ಮಧ್ಯಾಹ್ನದ ಸುಡು ಸಮಯ. ಆಶ್ರಮದ ನಿರ್ದೇಶಕರಿಗೆ ಗುರುಗಳು ಮೊದಲೇ